# ದಕ್ಷಿಣ ಕಾಶಿ—ಕೊಲ್ಹಾಪುರ

ಡಾ. ಹೆಚ್. ಪಾಂಡುರಂಗ ವಿಠಲ

*ಪ್ರಸಿದ್ಧ ಯಾತ್ರಾಸ್ಥಳವಾದ ಕೊಲ್ಹಾಪುರದ ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವಗಳನ್ನು ವಿವರಿಸಿರುವ ಡಾ. ಪಾಂಡುರಂಗ ವಿಠಲ ಅವರು ಸದ್ವಿದ್ಯಾ ಪಾಠಶಾಲೆಯ ಪದವಿ ಪೂರ್ವ ವಿಭಾಗದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ.*

**ಆ**ರ್ಥಿಕವಾಗಿ ಮುಂದುವರೆದ ರಾಜ್ಯ ಮಹಾರಾಷ್ಟ್ರ. ಇಲ್ಲಿನ ಜನರ ಅಧಿದೇವತೆ ಕೊಲ್ಹಾಪುರದ ಮಹಾಲಕ್ಷ್ಮಿ. ಕೊಲ್ಹಾಪುರದ ಪ್ರಾಚೀನ ಹೆಸರು ಕರವೀರಪುರ. ಅಗಸ್ತ್ಯ-ಲೋಪಾಮುದ್ರೆಯರು ಪುರಾಣಕಾಲದಲ್ಲಿ ಪಂಚಗಂಗಾ ತೀರದ ಈ ಪವಿತ್ರ ಸ್ಥಳಕ್ಕೆ ಬಂದಿದ್ದರು. ಇತಿಹಾಸಕಾಲದಲ್ಲಿ ಕೊಂಕಣದ ಕರ್ಣದೇವ, ಮೌರ್ಯ, ಚಾಲುಕ್ಯ, ರಾಷ್ಟ್ರಕೂಟ, ಶಿಲಾಹಾರ, ಯಾದವ ವಂಶಗಳು ಈ ನಗರವನ್ನು ಆಳಿದರು. ಹದಿನಾಲ್ಕನೆ ಶತಮಾನದಲ್ಲಿ ಶೃಂಗೇರಿ ಶಾರದಾಪೀಠದ ಜಗದ್ಗುರು ವಿದ್ಯಾಶಂಕರರು ಇಲ್ಲಿ ಒಂದು ಪೀಠವನ್ನು ಸ್ಥಾಪಿಸಿದರು. ಹೀಗೆಯೇ ಹದಿನೇಳನೆ ಶತಮಾನದಲ್ಲಿ ಶಿವಾಜಿ, ಅನಂತರ ಸಂಭಾಜಿ, ಸ್ವಾಮಿ ವಿವೇಕಾನಂದರು, ಲೋಕಮಾನ್ಯ ತಿಲಕರು, ಸಾವರ್ಕರರು ಕೊಲ್ಹಾಪುರಕ್ಕೆ ಭೇಟಿ ನೀಡಿದ್ದರು. ಸಾಹು ಮಹಾರಾಜ, ರಾಜಾರಾಮ ಮಹಾರಾಜ, ಛತ್ರಪತಿ ಷಾಹಜಿ ಈ ಊರಿನಿಂದ ಆಡಳಿತ ನಡೆಸಿದ್ದರು.

ಇತ್ತೀಚೆಗೆ ಕೊಲ್ಹಾಪುರಕ್ಕೆ ಹೆಸರು ತಂದ ಮಹನೀಯರು ಅನೇಕರು. ಜ್ಞಾನಪೀಠಪ್ರಶಸ್ತಿ ಪಡೆದ ಭಾವೂಸಾಹೇಬ ಖಾಂಡೇಕರ, ಜಿ.ಡಿ ಮಡಗೊಳಕರ, ಬಾಬೂರಾವ ಪೇಂಟರ ಮೊದಲಾದ ಲೇಖಕರು, ಕುಸ್ತಿಪಟು ದಾದು ಚೌಗುಲೆ, ಸಿನಿಮಾದ ವಿ. ಶಾಂತಾರಾಂ—ಪ್ರಸಿದ್ಧರಲ್ಲಿ ಕೆಲವರು.

ಈಗ ವಿಸ್ತಾರವಾಗಿರುವ ಕೊಲ್ಹಾಪುರ ೯ನೆಯ ಶತಮಾನದ ಮೊದಲು ನದಿ, ಕೆರೆಗಳ ದಂಡೆಯ ಮೇಲಿದ್ದ ಆರು ಹಳ್ಳಿಗಳ ಸಮೂಹವಾಗಿತ್ತು. ಇವುಗಳಲ್ಲಿ ಪಂಚಗಂಗಾ ದಂಡೆಯ ಗುಡ್ಡವೊಂದರ ಮೇಲಿದ್ದ ಬ್ರಹ್ಮಪುರಿ ಪ್ರಾಚೀನ. ವ್ಯವಸಾಯಕ್ಕೆ ತೊಡಗಿದ ಮಾನವನು ರಕ್ಷಣೆ, ಪೋಷಣೆಗಾಗಿ ನದಿಯ ಪಕ್ಕದ ಎತ್ತರದ ಸ್ಥಳಗಳಲ್ಲಿ ಗುಂಪಾಗಿ ನೆಲೆಯೂರುತ್ತಿದ್ದ. ಗೌತಮೀಪುತ್ರ ಶಾತಕರ್ಣಿ ಅಥವಾ ಶಾತವಾಹನನ ಆಳ್ವಿಕೆ (ಕ್ರಿ.ಶ. ೧೦೦-೧೩೦)ಯಲ್ಲಿ ಇಲ್ಲಿ ಇಟ್ಟಿಗೆಯಿಂದ ಕಟ್ಟಿದ ಮನೆಗಳ ಗ್ರಾಮ ಇತ್ತು. ಇದರ ಅವಶೇಷಗಳ ಎಡೆಯಲ್ಲಿ ರೋಮನ್ ವಸ್ತುಗಳ ಮಣ್ಣಿನ ಪ್ರತಿಕೃತಿಗಳು ಸಿಕ್ಕಿವೆ. ಊರು ಪಾಳುಬಿದ್ದಮೇಲೆ ಹದಿನೇಳನೆ ಶತಮಾನದಲ್ಲಿ ಪನ್ಹಾಳಕ್ಕೆ ಹೋಗುವ ಮಾರ್ಗದಲ್ಲಿ ಔರಂಗಜೇಬ ಇಲ್ಲಿ ಬೀಡುಬಿಟ್ಟಿದ್ದ. ಇಲ್ಲೊಂದು ಮಸೀದಿಯೂ ಇತ್ತು. ಹತ್ತೊಂಬತ್ತನೇ ಶತಮಾನದಲ್ಲಿ ಈ ಜಾಗವು ಕ್ರೈಸ್ತಪ್ರಚಾರಕರಿಗೆ ಸೇರಿತು. ಅವರು ೧೮೭೪ರಲ್ಲಿ ಒಂದು ಚರ್ಚನ್ನು ಕಟ್ಟಿದರು.

ಸುಮಾರು ೬ನೇ ಶತಮಾನದಲ್ಲಿ ಆರಂಭಿಸಿ ಚಾಲುಕ್ಯ ರಾಜರುಗಳು ಮಹಾಲಕ್ಷ್ಮೀ ದೇವಸ್ಥಾನವನ್ನು ೯ನೇ ಶತಮಾನದಲ್ಲಿ ಕಟ್ಟಿ ಮುಗಿಸಿದರು. ಅಲ್ಲಿಯವರೆಗೆ "ಕೊಲ್ಹಾಪುರ" ಎಂಬ ಹೆಸರಿನ ಉಲ್ಲೇಖವಿಲ್ಲ—ಈ ಪ್ರದೇಶವನ್ನು ಕರಾಡ ಎಂದು ಕರೆಯಲಾಗಿತ್ತು; ಇದು ಪವಿತ್ರಸ್ಥಳವೂ ಆಗಿರಲಿಕ್ಕಿಲ್ಲ. ಈ ದೇವಸ್ಥಾನದ ವೈಶಿಷ್ಟ್ಯವೆಂದರೆ ಇದನ್ನು ಎತ್ತರದ ಜಾಗದಲ್ಲಿ ಕಟ್ಟಿಲ್ಲ—ಎಲ್ಲಿಂದ ಪ್ರವೇಶಿಸಿದರೂ ಇಳಿಯಬೇಕು. ಸುತ್ತಲೆಲ್ಲ ಜನನಿಬಿಡ ಸ್ಥಳವಾಗಿರುವುದರಿಂದ ಹಿಂದೆ ಹೇಗಿತ್ತೆಂಬುದು ತಿಳಿಯದಿದ್ದರೂ ಇದು ಕೊಳ್ಳವಾಗಿದ್ದು, ಹಳ್ಳವೂ ಹರಿಯುತ್ತಿದ್ದಿರಬಹುದು. ಇಂತಹ ಸ್ಥಳವನ್ನು ಏಕೆ ಆರಿಸಿದರೋ! ಕರವೀರ ಮಾಹಾತ್ಮ್ಯದಲ್ಲಿ ಪ್ರಳಯಜಲದಿಂದ ಈ ಸ್ಥಳವನ್ನು ಮಹಾಲಕ್ಷ್ಮಿ ತನ್ನ ಕೈಯಿಂದ ಮೇಲೆತ್ತಿ ಹಿಡಿದಳು ಎಂದಿದೆ. ಈ ಜೌಗುಪ್ರದೇಶವು ದೇವಸ್ಥಾನದಿಂದಾಗಿ ಶುದ್ಧವೂ ಪವಿತ್ರವೂ ಆಯಿತು. ಇದನ್ನು ಕೊಲ್ಲಾಪುರ, ಕೊಲ್‌ಪುರ, ಕೊಲಗಿರಿ, ಕೊಲದಗಿರಿ ಪಟ್ಟಣ ಎಂದೆಲ್ಲ ಕರೆಯಲಾಗಿದೆ. ಇದು ಕನ್ನಡದ ಹೆಸರು. ಕೊಳ್ಳ ಎಂದರೆ ಕಣಿವೆ, ಪುರ ಎಂದರೆ ನಗರ. ಮರಾಠಿ ಪ್ರಭಾವದಿಂದಾಗಿ 'ಹ'ಕಾರ ಸೇರಿ ಕೊಲ್ಹಾಪುರವಾದದ್ದು, ಹತ್ತೊಂಬತ್ತನೆ ಶತಮಾನದಲ್ಲಿ. ದೇವಸ್ಥಾನದ ನಿರ್ಮಾಣದಿಂದ ಈಚೆಗೆ 'ಕರವೀರ' ಶಬ್ದದ ಬಳಕೆಯೂ ಅಲ್ಲಲ್ಲಿ ಕಾಣುತ್ತದೆ.

ಸುಮಾರು ನಲವತ್ತು ಕೆ.ಜಿ. ತೂಕದ ಅಮೂಲ್ಯ ಕಲ್ಲಿನಲ್ಲಿ ಕೆತ್ತಿದ ಮಹಾಲಕ್ಷ್ಮಿಯ ವಿಗ್ರಹ ತುಂಬ ಪ್ರಾಚೀನ. ಈ ಕಲ್ಲಿನಲ್ಲಿ ಹಾಗೂ ಕೆಳಗಿನ ಪೀಠದಲ್ಲಿ ವಜ್ರಗಳಿವೆ. ವಿಗ್ರಹದ ಹಿಂದೆ ಸಿಂಹವಿದೆ. ಮಧ್ಯೆ ಪ್ರಾಕೃತಿಕವಾದ ಕಮಲದ ಕೆತ್ತನೆ. ವಿಗ್ರಹದ ಚತುರ್ಭುಜಗಳಲ್ಲಿ ಎರಡರಲ್ಲಿ ತೆಳ್ಳನೆಯ ಬೆತ್ತದ ಖಡ್ಗ ಮತ್ತು ಗುರಾಣಿ, ಇನ್ನೆರಡರಲ್ಲಿ ಬಲಗೈನಲ್ಲಿ ಮೊಳಂಗ ಹಣ್ಣು ಮತ್ತು ಎಡಗೈಯಲ್ಲಿ ಪಾನಪಾತ್ರೆ ಇದೆ. ತಲೆಯ ಕಿರೀಟದ ಮೇಲೆ ಹಿಂದಿರುವ ಶೇಷನ ಹೆಡೆ ನೆರಳನ್ನಿತ್ತಿದೆ.

## ಅನುದಿನದ ಪೂಜೆ-ಜಾತ್ರೆಗಳು

ಭೂಪರಾಗದ ಸಂಗೀತಸೇವೆಯೊಡನೆ ಬೆಳಿಗ್ಗೆ ನಾಲ್ಕೂವರೆಗೆ ದೇವಿಗೆ ಕಾಕದಾರತಿ ಆಗುತ್ತದೆ. ಎಂಟೂವರೆಗೆ ಮಹಾಪೂಜೆ. ಮಂಗಳಾರತಿ. ವಿವಿಧ ಹೂಗಳು ಕುಂಕುಮದಿಂದ ಹನ್ನೊಂದೂವರೆವರೆಗೆ ಅರ್ಚನೆ, ನೈವೇದ್ಯ ಸಲ್ಲಿಸಿ ಕರ್ಪೂರ ಆರತಿ. ಭಕ್ತರಿಂದ ಮಹಾಪೂಜೆ ಇಲ್ಲದಿದ್ದಲ್ಲಿ ಪಾದಗಳಿಗೆ ಪಂಚಾಮೃತ ಅಭಿಷೇಕ, ಆರತಿಗಳು ಮಧ್ಯಾಹ್ನ ಎರಡು ಗಂಟೆಯವರೆಗೆ ಮುಂದುವರೆಯುತ್ತವೆ.

ಅನಂತರ ಒಡವೆಗಳಿಂದ ಅಲಂಕಾರ ಪೂಜೆ. ಸಂಜೆ ಏಳೂವರೆಗೆ ಭೋಗ ಆರತಿ. ಶುಕ್ರವಾರ ರಾತ್ರಿ ದೇವಿಗೆ ವಿಶೇಷ ನೈವೇದ್ಯ. ಒಡವೆಗಳನ್ನು ಖಜಾನೆಗೆ ಕಳುಹಿಸಿದ ಬಳಿಕ ೧೦ ಗಂಟೆಗೆ ಶೇಜಾರತಿ, ಸಿಹಿಹಾಲಿನ ನೈವೇದ್ಯ. ನಿದ್ರಾವಿದ ಸಂಗೀತದ ಬಳಿಕ ಬಾಗಿಲು ಹಾಕಲಾಗುತ್ತದೆ. ಕಾರ್ತಿಕ ದೀಪಾವಳಿಯಿಂದ ಹುಣ್ಣಿಮೆಯವರೆಗೆ, ತ್ರ್ಯಂಬುಳಿ ಜಾತ್ರೆ, ರಥೋತ್ಸವ, ಅಷ್ಟಮಿ ಜಾಗರಣೆ, ಗ್ರಹಣ, ಗೋಕುಲಾಷ್ಟಮಿ, ಕಿರಣೋತ್ಸವ ಮುಂತಾದುವು ವಿಶೇಷ ಪೂಜೆಯ ದಿನಗಳಾಗಿದ್ದು ಭಕ್ತರು ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಾರೆ. ದಕ್ಷಿಣ, ಪಶ್ಚಿಮ ಮಹಾರಾಷ್ಟ್ರದ ಲಕ್ಷಾಂತರ ಜನ ಸೇರಿ ಪೂಜೆ ಸಲ್ಲಿಸುವುದು ದಸರಾದ ಒಂಬತ್ತನೇ ದಿನ. ಅದರಲ್ಲೂ ಆಶ್ವಯುಜಶುದ್ಧ ಪಾಡ್ಯ, ಪಂಚಮಿ, ಅಷ್ಟಮಿ, ಮಹಾನವಮಿಗಳು ವಿಶೇಷ. ಪಂಚಮಿಯಂದು ಲಕ್ಷ್ಮೀ ವಿಗ್ರಹವನ್ನು ತ್ರ್ಯಂಬುಳಿ ಮಹಾಜಾತ್ರೆಗೆ ಒಯ್ಯುವರು. ದೇವಿಯು ಅಷ್ಟಮಿಯಂದು ನಿದ್ರಿಸುವುದಿಲ್ಲ—ಜಾಗರಣೆ; ಅಂದು ದೇವಿ ಅನೇಕ ಮಹಿಳೆಯರ ಮೈದುಂಬುವಳು. ದಶಮಿಯಂದು ಮಹಾಕಾಳೀ ಮಂದಿರದಲ್ಲಿ ಹೋಮ, ಪೂರ್ಣಾಹುತಿ. ಪೂರ್ಣಿಮೆಯಂದು ಮಹಾಪ್ರಸಾದ. ಹರಿಜನರಿಂದ ಆರತಿ ಸ್ವೀಕರಿಸುವ ದೇವಿ ಶ್ರೀಧರಸ್ವಾಮಿ ಮಠಕ್ಕೆ ಹೋಗಿ, ರಾತ್ರಿ ದೇವಾಲಯಕ್ಕೆ ಹಿಂದಿರುಗುವಳು.

## ಇತರ ಪ್ರೇಕ್ಷಣೀಯ ಸ್ಥಳಗಳು

**ಭವಾನೀ ಮಂಟಪ** : ಕೊಲ್ಹಾಪುರ ಸ್ವತಂತ್ರ ರಾಜ್ಯವಾದ ಮೇಲೆ ಎರಡನೇ ಶಿವಾಜಿಯಿಂದ ಕಟ್ಟಲ್ಪಟ್ಟ ಹಳೆಯ ಅರಮನೆ ಸಾದತ್‌ಖಾನನಿಂದ ಅರ್ಧ ನಾಶವಾಗಿ, ಈಗ ಅದನ್ನು ಸರಿಪಡಿಸಲಾಗಿದೆ. ಇದರ ಮಧ್ಯೆ ತುಳಜಾ ಭವಾನಿ ದೇವಸ್ಥಾನ, ಮಂಟಪ ಇವೆ. ಅಬಾಸಾಹೇಬನೆಂದು ಹೆಸರಾದ ಶಂಭುಮಹಾರಾಜ ಈ ಮಂಟಪದಲ್ಲೇ ಕೊಲೆಯಾದದ್ದು. ಛತ್ರಪತಿ ರಾಜಾರಾಮ ಮಹಾರಾಜ ಇದನ್ನು ನವೀಕರಿಸಿದ. ಈಗ ಇಲ್ಲಿ ಬಸ್‌ನಿಲ್ದಾಣ, ಸರ್ಕಾರಿ ಕಛೇರಿಗಳು, ಶಾಲೆ ಇದ್ದು, ಐತಿಹಾಸಿಕ ದಿನಾಚರಣೆಗಳನ್ನು ಆಚರಿಸಲಾಗುತ್ತದೆ.

**ಕಾಶೀ ವಿಶ್ವೇಶ್ವರ ದೇವಾಲಯ** : ಮಹಾಲಕ್ಷ್ಮೀ ದೇವಸ್ಥಾನದ ಉತ್ತರ ದ್ವಾರದಲ್ಲಿದೆ. ಅಗಸ್ತ್ಯ, ಪ್ರಹ್ಲಾದ, ಇಂದ್ರಸೇನರು ಇದನ್ನು ಸಂದರ್ಶಿಸಿದ್ದಾರೆ. ಇಲ್ಲಿ ಇದ್ದ ಎರಡು ಕೊಳಗಳಲ್ಲಿ ಕಾಶೀಕುಂಡ ಕಸದ ತೊಟ್ಟಿಯಾಗಿ, ಶಿಥಿಲವಾಗಿದೆ. ಮಣಿಕರ್ಣಿಕಾ ಕುಂಡ ಮಹಾಲಕ್ಷ್ಮೀ ಉದ್ಯಾನವನವಾಗಿದೆ.

**ಕಪಿಲೇಶ್ವರ** : ಗ್ರಾಮದೇವತೆ ಕಪಿಲೇಶ್ವರನ ದರ್ಶನ ಮಾಡಿದ ಮೇಲೆ ಮಹಾಲಕ್ಷ್ಮಿಯನ್ನು ನೋಡಬೇಕೆಂಬ ನಂಬಿಕೆ ಇದೆ. ಮೊಗಲರ ದಾಳಿಯ ಕಾಲದಲ್ಲಿ ಮಹಾಲಕ್ಷ್ಮೀ ವಿಗ್ರಹವನ್ನು ಕಪಿಲೇಶ್ವರ ತೀರ್ಥದಲ್ಲಿ ಮುಳುಗಿಸಲಾಗಿತ್ತು. ಈ ತೀರ್ಥ, ಮೇಲಿನ ಮಂಟಪಗಳು ಇದ್ದ ಜಾಗದಲ್ಲಿ ಈಗ ತರಕಾರಿ ಮಾರುಕಟ್ಟೆ ಇದೆ. ದೇವಸ್ಥಾನದ ಸುತ್ತ ವ್ಯಾಪಾರಿಗಳು ತುಂಬಿದ್ದಾರೆ.

**ಮಹಾಕಾಲೀ** : ಶಿವಾಜಿ ಪೇಟೆಯ ಮಹಾಕಾಲೀ ತಾಲೀಮಿನ ಹತ್ತಿರ ಅಮೃತಕುಂಡದ ಪಕ್ಕ ಇರುವ ಪ್ರಾಚೀನ ದೇವಸ್ಥಾನ. ಯುದ್ಧದೇವತೆ ಮಹಾಕಾಲಿಯ ಭೀಕರ ಮೂರ್ತಿಯ ಬಲಗಡೆ ಐದು ಹೆಡೆಗಳ, ಎಡಗಡೆ ಒಂದು ಹೆಡೆಯ ಸರ್ಪಗಳಿವೆ. ಒಂದೂವರೆ ಅಡಿಯ ಮೂರ್ತಿಯ ಚೆಲುವನ್ನು ಹಿತ್ತಾಳೆಯ ಕವಚ ಹೆಚ್ಚಿಸಿದೆ. ಮೂರ್ತಿಯ ಮುಂದಿದ್ದ ಮಯೂರೀ ತೀರ್ಥವೆಂಬ ಚಿಲುಮೆ ಈಗ ಬತ್ತಿಹೋಗಿದೆ.

**ರಂಕಾಲಾ ಕೆರೆ** : ಒಂಬತ್ತನೆ ಶತಮಾನದ ಭೂಕಂಪಕಾಲದಲ್ಲಿ ಹಿಂದೆ ಇದ್ದ ಕರಿಕಲ್ಲು ಗಣಿಯ ತುಂಬ ಜಲ ತುಂಬಿ ದೊಡ್ಡ ಕೆರೆಯಾಗಿದೆ. ದೇವಿಯ ಭಟ ರಂಕಭೈರವನ ಗುಡಿಯಿಂದಾಗಿ ರಂಕಾಲಾ ಎಂಬ ಹೆಸರು. ಹನ್ನೆರಡನೆ ಶತಮಾನದ ಸಂಧ್ಯಾಮಠ ಒಂದೆಡೆ, ಇನ್ನೊಂದೆಡೆ ನೀರಿನ ಮಟ್ಟ ನಿಯಂತ್ರಿಸುವ ಗೋಪುರ ಕೆರೆಯ ಸೊಬಗನ್ನು ಹೆಚ್ಚಿಸಿವೆ. ೧೯೩೪ರಲ್ಲಿ ಕೆರೆಯ ಹಿಂದೆ ಕಟ್ಟಿದ ಶಾಲಿನೀ ಅರಮನೆ (ಹಿಂದೆ ಕಾಲೇಜಾಗಿದ್ದು ಈಗ ಮಾನಸಿಂಗ್ ಗ್ರೂಪಿನ ತ್ರಿತಾರಾ ಹೋಟೆಲಾಗಿದೆ) ತನ್ನ ಸುಂದರ ವಾಸ್ತುಶಿಲ್ಪದಿಂದ ಕಂಗೊಳಿಸುತ್ತದೆ. ಹತ್ತೊಂಬತ್ತನೆ ಶತಮಾನದಲ್ಲಿ ನಾಲ್ಕನೇ ಶಿವಾಜಿ ಕಟ್ಟಿಸಿದ ನಾಲ್ಕು ಘಟ್ಟಗಳು, ದಂಡೆಯ ಗೋಡೆ, ಪಕ್ಕದ ಕಾಲುಹಾದಿ ಇವು ಕೆರೆದಂಡೆಯನ್ನು ಕೊಲ್ಹಾಪುರದ ಚೌಪಾಟಿ ಎಂದು ಕರೆಯುವಂತೆ ಮಾಡಿವೆ. ಕೆರೆ ತನ್ನ ಒರತೆಯಿಂದಾಗಿ ಎಂದೂ ಬತ್ತದೆ, ಕಬ್ಬುಬೆಳೆಗೆ ನೀರನ್ನು ಒದಗಿಸುತ್ತದೆ.

**ಉತ್ತರೇಶ್ವರ ಮಹಾದೇವ** : ಕೊಲ್ಹಾಪುರದ ಲಿಂಗಗಳಲ್ಲೇ ಉತ್ತರದ ಗುಡ್ಡದಲ್ಲಿರುವ ಈ ಮಹಾದೇವನ ಲಿಂಗ ದೊಡ್ಡದು. ಹದಿಮೂರು ಅಡಿ ಲಿಂಗವನ್ನು ಪೂಜೆ ಮಾಡುವುದು ಕಷ್ಟವೆಂದು ಐದು ಅಡಿ ಮಾತ್ರ ಕಾಣುವಂತೆ ಹುಗಿದಿದ್ದಾರೆ. ಈಚೆಗೆ ಸಭಾಮಂಟಪವನ್ನು ನಿರ್ಮಿಸಲಾಗಿದ್ದು, ಇಲ್ಲಿ ಗಣಪತಿ, ಪಾರ್ವತಿ, ಹನ್ನೊಂದು ಮಾರುತಿ ವಿಗ್ರಹಗಳಿವೆ.

**ಟೌನ್‌ಹಾಲ್** : ಹತ್ತೊಂಬತ್ತನೆ ಶತಮಾನದ ಈ ದೊಡ್ಡ

ಸಭಾಂಗಣವನ್ನು ಸರ್ಕಾರ ಪ್ರಾಚೀನ ವಸ್ತುಸಂಗ್ರಹಾಲಯವನ್ನಾಗಿಸಿದೆ. ಬ್ರಹ್ಮಗಿರಿ ಉತ್ಖನನದಲ್ಲಿ ಸಿಕ್ಕ ವಸ್ತುಗಳು, ಪ್ರಾಚೀನ ವಿಗ್ರಹಗಳು, ವರ್ಣಚಿತ್ರಗಳು, ಆಯುಧಗಳು ಇಲ್ಲಿವೆ. ಸುತ್ತಲೂ ಸುಂದರ ಉದ್ಯಾನವನ, ಕೋರ್ಟು, ಸರಕಾರಿ ಕಛೇರಿಗಳು, ಆಸ್ಪತ್ರೆ "ಪುಢಾರಿ" ದೈನಿಕ ಕಾರ್ಯಾಲಯ ಇತ್ಯಾದಿಗಳೂ ಇದ್ದು, ಒಂದು ದೊಡ್ಡ ಚಿಲುಮೆ, ಮಹಾದೇವನ ಮಂದಿರವೂ ಇವೆ.

**ಗಣಪತಿಗಳು** : ಹದಿನೆಂಟನೆಯ ಶತಮಾನದಲ್ಲಿ ಮಹಾಲಕ್ಷ್ಮಿಯನ್ನು ಪುನರ್ ಪ್ರತಿಷ್ಠಾಪಿಸುವಾಗ ಗರುಡಮಂಟಪದಲ್ಲಿ ಸ್ಥಾಪಿಸಿದ ಗಣಪತಿಯ ತಲೆಯ ಮೇಲೆ ನೆರಳಾಗಿ ಸರ್ಪವಿದೆ, ಎರಡು ಬದಿಯೂ ಇಲಿಗಳಿವೆ. ಊರಿನ ದಕ್ಷಿಣದ ಕೊನೆಯಲ್ಲಿ ಜೋಷಿ ವಾಡೆಯಲ್ಲಿ ಕನಸಿನ ಪ್ರಕಾರ ಬಾವಿಯಲ್ಲಿ ಸಿಕ್ಕಿದ ಸ್ವಯಂಭು ಗಣಪತಿಮಂದಿರವಿದೆ. ಮಧ್ಯೆ ಕಂಬವಿಲ್ಲದೆ ಕಟ್ಟಿದ ಗುಡಿ ಇದು. ಬಾಳಿಂಗೆ ರೋಡಿನ ಸಿದ್ಧ (ಗಣಪತಿ) ಬಟುಕೇಶ್ವರ (ಭೈರವ) ಗುಡಿ ಎಲ್ಲಕ್ಕಿಂತ ಪುರಾತನವಾದುದು. ಮಹಾಕಾಲೀ ಮಂದಿರದ ಬಳಿ ಗೋಡೆಯಲ್ಲಿ ಎಡಗೈಯಲ್ಲಿ ಲೇಖನಿ ಹಿಡಿದು ನಿಂತ ಸಾಕ್ಷಿ ವಿನಾಯಕನಿದ್ದಾನೆ. ಕೊಲ್ಹಾಪುರದ ಪೂರ್ವದಲ್ಲಿ ಮರಳುಗಲ್ಲಿನಲ್ಲಿ ಕೆತ್ತಿದ ಸಿದ್ಧಿ ವಿನಾಯಕ, ದಕ್ಷಿಣದ ಟಿಂಬರ್ ಮಾರ್ಕೆಲ್ ಕಾಲೋನಿಯಲ್ಲಿ ನೆಲ ಅಗೆಯುವಾಗ ಗೋಕುಲಾಷ್ಟಮಿಯಂದು ಸಿಕ್ಕ ಅಷ್ಟಸಿದ್ಧಿ ವಿನಾಯಕ, ಮಹಾದ್ವಾರದ ಬಳಿಯ ಋದ್ಧಿ ಸಿದ್ಧಿಯರ ಜತೆಗಿರುವ, ಲಿಂಗವನ್ನು ತಲೆಯಮೇಲೆ ಧರಿಸಿರುವ ಸಿದ್ಧಿವಿನಾಯಕ —ಇನ್ನಿತರ ಪ್ರಸಿದ್ಧ ಗಣಪತಿಗಳು.

**ಕಾನೇರಿ** : ಐನೂರು ವರ್ಷಗಳ ಕೆಳಗೆ ಲಿಂಗಾಯತ ಗುರುಗಳಾದ ಕಾಡಸಿದ್ಧೇಶ್ವರರು ಬೆಟ್ಟದ ಮೇಲೆ ಈ ಶಿವಲಿಂಗವನ್ನು ಸ್ಥಾಪಿಸಿದರು. ನೂರಿಪ್ಪತ್ತೈದು ಅಡಿ ಆಳದ ಬಾವಿ ಇಲ್ಲಿದೆ. ಶಿವಾಜಿ, ಸಂಭಾಜಿ ಮಹಾರಾಜರು ದೇವಸ್ಥಾನಕ್ಕೆ ಬರುತ್ತಿದ್ದು, ದೇಣಿಗೆ ನೀಡಿದ್ದಾರೆ. ದೊಡ್ಡ ನಂದಿ ವಿಗ್ರಹ ಮಂಟಪವೊಂದರಲ್ಲಿದೆ. ಕರ್ನಾಟಕದ ಭಕ್ತರು ಹೆಚ್ಚು. ಕೊಲ್ಹಾಪುರದಿಂದ ಒಂದು ಮೈಲು ದೂರದಲ್ಲಿದೆ. ಮಿರಜಿನಲ್ಲಿಯಂತೆ ಇಲ್ಲೂ ಶಿವಭಕ್ತ ಮುಸ್ಲಿಂಸಂತ ಮಿರಾಸಾಹೇಬನ ಗೋರಿ ಇದೆ. ಇದಕ್ಕೂ ಪೂಜೆ ಸಲ್ಲುತ್ತದೆ.

ಇದಲ್ಲದೆ ಕುಸ್ತಿಪಂದ್ಯಗಳು ನಡೆಯುವ ರಾಜರ್ಷಿ ಸಾಹು ಖಾಸಬಾಗ್ ಮೈದಾನ; ವಾಟೆಗಾಂವ್‌ನಲ್ಲಿನ ವಟೇಶ್ವರ ದೇವಸ್ಥಾನ; ಚಲನಚಿತ್ರ ನಟ ಚಂದ್ರಕಾಂತ ಮುಂಢಾರೆಯ ಚಿತ್ರಕಲಾ ಮ್ಯೂಸಿಯಂ; ಹೆಸರಾಂತ ಶಿವಾಜಿ ಯೂನಿವರ್ಸಿಟಿ; ಶಿವಾಜಿಯ ವಂಶಸ್ಥರ ಐತಿಹಾಸಿಕ ವಸ್ತುಗಳು, ಕತ್ತಿಗಳು, ರಜತ ಸಿಂಹಾಸನ, ಸಾಹು ಮಹಾರಾಜ ಕೊಂದ ಕಾಡುಪ್ರಾಣಿಗಳು, ಪತ್ರಗಳು, ಕಾಣಿಕೆಗಳು ಇತ್ಯಾದಿಗಳನ್ನು ಪ್ರದರ್ಶಿಸಿದ ಛತ್ರಪತಿ ಶಾಹುಜಿ ಮ್ಯೂಸಿಯಂ; ಅನೇಕ ವನ್ಯಜೀವಿಗಳು ಮತ್ತು ಹೆಸರಾಂತ 'ಗಾವಾ' ಕಾಡೆಮ್ಮೆಗಳನ್ನು ಹೊಂದಿರುವ ದಾಜೀಪುರ ಅಭಯಾರಣ್ಯ ಇವುಗಳನ್ನೂ ನೋಡಲೇಬೇಕು.

# ಪ್ರಹಸನ ಪ್ರಸಂಗ

ಜಾತಿಗೆ (ಕು)ಖ್ಯಾತವಾದ ಭಾರತವು ಆಗಲೇ ಜನಭಾರದಿಂದ ತತ್ತರಿಸುತ್ತಿದೆ (ಭಾರ–ತ). ಅದರೊಂದಿಗೆ ಜಾತಿಗೊಂದಲದ ಭಾರವೂ ಸೇರಿಕೊಂಡಿದೆ. ಭಾರತ ಎರಡು ಜಾತಿಗಳಿಂದ ಬಳಲುತ್ತಿದೆ: 'ಜ'ಅತಿಯಾಗಿರುವುದೊಂದು, ಜಾತಿಯ ಅತಿ ಮತ್ತೊಂದು.

ಒಂದು ಭೂತವು ಜಗತ್ತನ್ನು ಆಳಬೇಕೆಂದು ಬಯಸಿ ದೇವರ ಹತ್ತಿರ ಹೋಗಿ ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಅವನನ್ನು ಪ್ರಾರ್ಥಿಸಿತು.

**ದೇವರು:** ನೀನು ಜಗತ್ತನ್ನು ಆಳಬಹುದು. ಆದರೆ ಅದಕ್ಕೆ ಮೂರು ಷರತ್ತುಗಳಿವೆ.

**ಭೂತ:** ಯಾವುವು ಮೂರು ಷರತ್ತುಗಳು? ಯಾವ ಷರತ್ತಿಗೂ ನಾನು ಸಿದ್ಧ.

**ದೇವರು:** ಮೊದಲನೆಯದಾಗಿ ಪ್ರಪಂಚದಲ್ಲಿ ಎಷ್ಟು ಮರಳು ಕಣಗಳಿವೆ ಎಂದು ಹೇಳಬೇಕು.

ಭೂತವು ಕೂಡಲೇ ಹೋಗಿ ಒಂದು ವಾರದಲ್ಲಿ ಒಟ್ಟು ಮರಳು ಕಣಗಳ ಸಂಖ್ಯೆಯನ್ನು ಎಣಿಸಿಕೊಂಡು ಬಂದು ಹೇಳಿತು.

**ದೇವರು:** ವಿಶ್ವದಲ್ಲಿ ಎಷ್ಟು ನಕ್ಷತ್ರಗಳಿವೆ?

ಭೂತವು ಒಂದು ತಿಂಗಳ ಅವಧಿಯಲ್ಲಿ ಎಣಿಸಿ ಬಂದು ಇಂತಿಷ್ಟೇ ನಕ್ಷತ್ರಗಳಿವೆ ಎಂದು ಹೇಳಿತು.

**ದೇವರು:** ಭಾರತದಲ್ಲಿ ಎಷ್ಟು ಜಾತಿಗಳಿವೆ ಎಂದು ಹೇಳಬಲ್ಲೆಯಾ?

**ಭೂತ ಕೂಡಲೇ ಕಣ್ಮರೆಯಾಯಿತು, ಮತ್ತೆ ಹಿಂದಿರುಗಲೇ ಇಲ್ಲ.**

* * *

**ನಾ**ವು ಮಾಡುವ ತಪ್ಪುಗಳು ನಮಗೆ ಅಷ್ಟು ದೊಡ್ಡದಾಗಿ ಕಾಣಿಸುವುದಿಲ್ಲ. ಅದೇ ತಪ್ಪುಗಳು ಇತರರಲ್ಲಿ ಕಂಡರೆ ಅವು ಘೋರ ಅಪರಾಧಗಳಾಗಿ ಕಾಣುತ್ತವೆ. ನಮ್ಮ ತಪ್ಪುಗಳನ್ನು ಇತರರಿಗೆ ಹೇಳಬೇಕಾದ ಸಂದರ್ಭದಲ್ಲಿ ಅವು ತಪ್ಪುಗಳೇ ಅಲ್ಲವೇನೋ ಎಂಬ ರೀತಿಯಲ್ಲಿ ಹೇಳುತ್ತೇವೆ.

ಹುಡುಗನೊಬ್ಬನು ಕ್ರೈಸ್ತಪಾದ್ರಿಯ ಮುಂದೆ ಪಾಪ ನಿವೇದನೆಗೆ ಹೋಗುತ್ತಾನೆ. "ಫಾದರ್, ನಾನು ನೆಲಗಡಲೆಯನ್ನು ನದಿಗೆ ಎಸೆದೆ"

ಪಾದ್ರಿಯು ಇದರಲ್ಲೇನೂ ಅಂತಹ ಅಪರಾಧವನ್ನು ಕಾಣದೆ ಏನೂ ಪ್ರಾಯಶ್ಚಿತ್ತ ವಿಧಿಸದೆ ಕಳಿಸಿಬಿಟ್ಟನು. ಎರಡನೆಯ ಹುಡುಗ ಬಂದನು. ಅವನೂ, "ಫಾದರ್, ನಾನು ನೆಲಗಡಲೆಯನ್ನು ನದಿಗೆ ಎಸೆದೆ," ಎಂದನು. ಪಾದ್ರಿಯು ಅವನನ್ನೂ ಹಾಗೆಯೇ ಕಳಿಸಿದನು. ಅನಂತರ ಬಂದ ಮೂರನೆಯ ಹುಡುಗನೂ ಅದನ್ನೇ ಹೇಳಿದ. ನಾಲ್ಕನೆಯ ಹುಡುಗ ಬಂದಾಗ ಪಾದ್ರಿಯು "ನೀನೂ ನೆಲಗಡಲೆಯನ್ನು ನದಿಗೆ ಎಸೆದೆಯಲ್ಲವೇ?" ಎಂದು ಕೇಳಿದ. **ನಾಲ್ಕನೆಯ ಹುಡುಗ: "ಇಲ್ಲ, ನಾನೇ ನೆಲಗಡಲೆ."**